# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–2477/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 18/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಕಿರಣ್ ಅಣ್ಣಪ್ಪ ಗೊಂದಳಿ, ಗುಂಡೆವಾಡಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಕಿರಣ್ ಅಣ್ಣಪ್ಪ ಗೊಂದಳಿ ಇವರು ಈ ಸಂಸ್ಥೆಗೆ ದೂರೊಂದನ್ನು ನೀಡಿ, ಅಥಣಿ ತಾಲ್ಲೂಕಿನ ಗುಂಡೆವಾಡಿ ಗ್ರಾಮದ ಸರ್ವೆ‌ನಂ. 153/5 ಮತ್ತು 154/4ರ ಜಮೀನಿಗೆ ದೂರುದಾರರ ತಾತನಾದ ಶ್ರೀ ಶಂಕರ್ ದತ್ತು ಗೊಂದಳಿ ಇವರು ಮಾಲೀಕರಾಗಿದ್ದು, ಅವರು ಒಂದು ಪವರ್ ಆಫ್ ಅಟಾರ್ನಿಯನ್ನು ದೂರುದಾರರಿಗೆ ನ್ಯಾಯಾಲಯದಲ್ಲಿ ಪ್ರಕರಣವನ್ನು ನಡೆಸಲು, ಸರ್ಕಾರಿ ಕಛೇರಿಗಳಲ್ಲಿ ಅರ್ಜಿಯನ್ನು ಸಲ್ಲಿಸಲು ಮತ್ತು ದೂರು ಸಲ್ಲಿಸುವ ಸಲುವಾಗಿ ಕೊಟ್ಟಿದ್ದು, ಅದರಂತೆ, ದೂರುದಾರರು ಸದರಿ ಆಸ್ತಿಗಳ ನಿರ್ವಹಣೆ ಮಾಡುತ್ತಿರುತ್ತಾರೆ. ಸರ್ವೆ ನಂ.153/5ರ ಜಮೀನು ಒಟ್ಟು 1ಎಕರೆ – 39 ಗುಂಟೆ ವಿಸ್ತೀರ್ಣವಾಗಿದ್ದು, ಸರ್ವೆ ನಂ.154/4 ಜಮೀನು 2 ಎಕರೆ – 8 ಗುಂಟೆ ವಿಸ್ತೀರ್ಣದಾಗಿತ್ತು. ಆದರೆ, ತಹಶೀಲ್ದಾರ್ ಕಛೇರಿಯ ನೌಕರರ ತಪ್ಪಿನಿಂದಾಗಿ ಸದರಿ ಸರ್ವೆ ನಂಬರ್‌ಗಳ ಸಂಬಂಧಿಸಿದ ಜಮೀನುಗಳ ಪಹಣಿಯಲ್ಲಿ, ಸದರಿ ಜಮೀನುಗಳ ವಿಸ್ತೀರ್ಣವನ್ನು ತಪ್ಪಾಗಿ ನಮೂದು ಮಾಡಲಾಗಿರುತ್ತದೆ. ಇದರಿಂದಾಗಿ, ದೂರುದಾರರ ಜಮೀನುಗಳ ನೆರೆಯ ಜಮೀನು ಮಾಲೀಕರಾದ ಶ್ರೀ ಕೃಷ್ಣಪ್ಪ ಗೊಂದಳಿ ಇವರು ತಕರಾರು ಮಾಡಿದ್ದರಿಂದ, ದೂರುದಾರರ ತಾತ ಅಸಲು ದಾವೆ ಸಂಖ್ಯೆ:471/2001 ಅನ್ನು ಡಿಕ್ಲೇರೇಷನ್ ಮತ್ತು ಇನ್‌ಜಂಕ್ಷನ್‌ಗಾಗಿ ದಾವೆಯನ್ನು ದಾಖಲಿಸಿದ್ದು, ಸದರಿ ದಾವೆಯು ದಿ:27/02/2004 ರಂದು ಡಿಕ್ರಿಯಾಗಿರುತ್ತದೆ. ಡಿಕ್ರಿಯಾಗಿ ತಿದ್ದುಪಡಿ ಸಲುವಾಗಿ ಆದೇಶ ಮಾಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ನ್ಯಾಯಾಲಯದ ಆದೇಶದಂತೆ ತಿದ್ದುಪಡಿ ಮಾಡದೆ ಇದ್ದಾಗ, ದಿ:28/02/2014 ರಂದು ದೂರುದಾರರು ಅಥಣಿ ತಹಶೀಲ್ದಾರ್ ರವರಿಗೆ ಒಂದು ಅರ್ಜಿಯನ್ನು ಸಲ್ಲಿಸಿ, ನ್ಯಾಯಾಲಯದ ಆದೇಶದಂತೆ ಆರ್.ಟಿ.ಸಿ ಯಲ್ಲಿ ಮೇಲೆ ಹೇಳಿದ ಜಮೀನುಗಳ ವಿಸ್ತೀರ್ಣವನ್ನು

ತಿದ್ದುಪಡಿ ಮಾಡಲು ಕೋರಿದ್ದು, ಇದುವರೆವಿಗೂ ಯಾವುದೇ ಕ್ರಮವನ್ನು ಜರುಗಿಸಿಲ್ಲವೆಂದು ಆದುದರಿಂದ, ಎದುರುದಾರರ ವಿರುದ್ಧ ಕ್ರಮವನ್ನು ಜರುಗಿಸಿ ತಮಗೆ ಉಂಟಾಗಿರುವ ತೊಂದರೆಯನ್ನು ನಿವಾರಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರುದಾರರ ಗುಂಡೆವಾಡಿ ಗ್ರಾಮದ ಸರ್ವೇ ನಂ.153/5 ಮತ್ತು 154/4ರ ಮೂಲ ವಿಸ್ತೀರ್ಣ ಕ್ರಮವಾಗಿ 1 ಎಕರೆ – 39ಗುಂಟೆ ಹಾಗೂ 2 ಎಕರೆ – 10 ಗುಂಟೆ ಎಂದು 1950ನೇ ಇಸವಿಯಲ್ಲಿ ಹಿಸ್ಸಾ ಫಾರಂ 12ರಲ್ಲಿ ನಮೂದಾಗಿರುತ್ತದೆ. ಅದರಂತೆ, ಕ್ಷೇತ್ರ ದುರಸ್ಥಿಯಾಗಿ ಸರ್ವೇ ನಂ.153/5ರ ಕ್ಷೇತ್ರವು 1 ಎಕರೆ – 18 ಗುಂಟೆ ಮತ್ತು ಸರ್ವೆ ನಂ.154/5ರ 19 ಗುಂಟೆ ಎಂದು ಬದಲಾವಣೆ ಆಗಿರುತ್ತದೆ. ಹಿಸ್ಸಾ ಫಾರಂ–12ರ ಪ್ರಕಾರ ಡೈರಿ ನಂ.1660ರ ಪ್ರಕಾರ ಗುಂಡೆವಾಡಿ ಗ್ರಾಮದ ಸರ್ವೇ ನಂಬರ್‌ಗಳ ಕ್ಷೇತ್ರ ದುರಸ್ತಿ ಮಾಡಿ ಗೇಣಿ ಮತ್ತು ಪಹಣಿ ಪತ್ರಗಳಲ್ಲಿ ಅಮಲ್‌ಬಜಾವಣೆ ಆಗಿದ್ದು ಇರುತ್ತದೆ. ದುರಸ್ತಿಯಾದ ಕ್ಷೇತ್ರ ಪ್ರಕಾರ ಇಲ್ಲಿಯವರೆಗೆ ಸದರಿ ಸರ್ವೇ ನಂಬರ್‌ಗಳ ಕ್ಷೇತ್ರವು ಗೇಣಿ ಮತ್ತು ಪಹಣಿ ಪತ್ರಿಕೆಗಳಲ್ಲಿ ಮುಂದುವರೆದುಕೊಂಡು ಬಂದಿರುತ್ತದೆ. ಯಾವುದೇ ಭೂಮಾಲೀಕರು ಹಿಸ್ಸಾ ಫಾರಂ ನಂ.12 ರಿಂದ ತೊಂದರೆಗೆ ಒಳಪಟ್ಟಿದಲ್ಲಿ, ಫಾರಂ ನಂ.12ರ ವಿರುದ್ಧ ಮೇಲ್ಮನವಿ ಸಲ್ಲಿಸಿ ಅದನ್ನು ರದ್ದು ಪಡಿಸಿಕೊಳ್ಳಬೇಕಾಗುತ್ತಿತ್ತು. ಆದರೆ, ಪ್ರಸುತ ದೂರುದಾರರು ಹೀಗೆ ಮಾಡದೆ, ಕ್ಷೇತ್ರ ದುರಸ್ತಿ ಮಾಡಲು ಅರ್ಜಿ ಸಲ್ಲಿಸಿದ್ದು, ಕಾನೂನಿಗೆ ಇದು ವ್ಯತಿರಿಕ್ತವಾಗಿದ್ದರೂ, ಈ ವಿಷಯವು 1950 ನೇ ಸಾಲಿಗೆ ಸಂಬಂಧಪಟ್ಟಿದ್ದರಿಂದ, ಇದನ್ನು ಪರಿಶೀಲಿಸಲು ಕಾಲಾವಕಾಶ ಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ.

3. ದೂರಿನಂಶಗಳನ್ನು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಮತ್ತು ಪ್ರಕರಣದಲ್ಲಿ ಹಾಜರುಪಡಿಸಲಾದ ದಾಖಲೆಯನ್ನು ಪರಿಶೀಲಿಸಿದಲ್ಲಿ, ದೂರುದಾರರು 2001ರಲ್ಲಿ ಸಲ್ಲಿಸಿದ ಅಸಲು ದಾವೆ ಸಂಖ್ಯೆ:471/2001ರ ದಾವೆಯ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ದಾವೆಯಲ್ಲಿ ಬೆಳಗಾವಿಯ ಜಿಲ್ಲಾಧಿಕಾರಿಯವರನ್ನು 2ನೇ ಪ್ರತಿವಾದಿಯಾಗಿ ಮಾಡಿರುವುದು ಕಂಡು ಬರುತ್ತದೆ. (ಸದರಿ ದಾವೆಯ ತೀರ್ಪಿನ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ದಾವೆಯ ತೀರ್ಪಿನಲ್ಲಿ ಮಾನ್ಯ ನ್ಯಾಯಾಲಯವು ವಾದಿಗಳು ಸರ್ವೆ ನಂ.153/5 1 ಎಕರೆ 39 ಗುಂಟೆ ಜಮೀನಿಗೆ ಹಾಗೂ ಸರ್ವೇ ನಂ.154/4ರ 2 ಎಕರೆ 8 ಗುಂಟೆ ಜಮೀನಿಗೆ ಮಾಲೀಕರೆಂದು ಘೋಷಿಸಿರುತ್ತದೆ. 2014–15ರ ಪಹಣಿ

ಪತ್ರಿಕೆಯನ್ನು ದೂರುದಾರರು ಹಾಜರುಪಡಿಸಿದ್ದು, ಅದರಲ್ಲಿ ಸರ್ವೇ ನಂ.154/5ರ ವಿಸ್ತೀರ್ಣವನ್ನು 19 ಗುಂಟೆ ಎಂದು ತೋರಿಸಿರುವುದು ಕಂಡು ಬರುತ್ತದೆ. (ಸದರಿ ಆರ್.ಟಿ.ಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ವಿಸ್ತೀರ್ಣವನ್ನು 1996-97ನೇ ಸಾಲಿಗೆ ಸಂಬಂಧಿಸಿದ ಆರ್‌ಟಿಸಿ ಯಲ್ಲೂ ಸಹ ನಮೂದು ಮಾಡಲಾಗಿರುತ್ತದೆ. ಅಂದರೇ, 0 ಎಕರೆ – 19 ಗುಂಟೆ ಎಂದು ನಮೂದಿಸಿರುವುದು ಕಂಡು ಬರುತ್ತದೆ. (ಸದರಿ ಪಹಣಿ ಪತ್ರಿಕೆಯನ್ನು ಹಾಜರುಪಡಿಸಲಾಗಿದೆ). ಈ ರೀತಿ ಮೇಲೆ ಹೇಳಿದ ಸರ್ವೇ ನಂಬರ್‌ಗಳ ವಿಸ್ತೀರ್ಣದಲ್ಲಿ ವ್ಯತ್ಯಾಸ ಉಂಟಾದ ಕಾರಣ ಮೇಲೆ ಹೇಳಿದ ಅಸಲುದಾವೆ ಸಲ್ಲಿಸಿದ್ದು, ಅದರಂತೆ, ವಾದಿಗಳ ಪರವಾಗಿ ಡಿಕ್ರಿಯಾಗಿರುತ್ತದೆ. ಸದರಿ ಡಿಕ್ರಿ ಆಧಾರದ ಮೇಲೆ ದೂರುದಾರರು ದುರಸ್ಥಿ ಕೋರಿ ಅರ್ಜಿ ಸಲ್ಲಿಸಿದ್ದು, ಅದರಂತೆ, ದೂರಸ್ಥಿ ಕ್ರಮ ಜರುಗಿಸಲಾಗುವುದೆಂದು ಅಥಣಿ ತಾಲ್ಲೂಕಿನ ತಹಶೀಲ್ದಾರ್ ರವರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಇದಾದ ನಂತರ ಆಕ್ಷೇಪಣೆಯಲ್ಲಿ ತಿಳಸಿರುವಂತೆ ಆರ್‌ಟಿಸಿ ಯಲ್ಲಿ ಕಂಡು ಬಂದ ಮೇಲೆ ಹೇಳಿದ ಸರ್ವೇ ನಂಬರ್‌ಗಳ ಜಮೀನುಗಳ ವಿಸ್ತೀರ್ಣದಲ್ಲಿ ಉಂಟಾದ ವ್ಯತ್ಯಾಸವನ್ನು ಸರಿಪಡಿಸಲಾಗಿದೆಯೇ ಇಲ್ಲವೇ ಎಂಬ ಬಗ್ಗೆ ವರದಿ ಕೋರಿ ಪತ್ರ ಬರೆಯಲಾಗಿದ್ದು, ಅದರಂತೆ, ಈಗಿನ ತಹಶೀಲ್ದಾರ್, ಅಥಣಿ ತಾಲ್ಲೂಕು, ಅಥಣಿ ಇವರು ವರದಿ ಸಲ್ಲಿಸಿದ್ದು, ಅದರಲ್ಲಿ, "ಗುಂಡೆವಾಡಿ ಗ್ರಾಮದ ಸರ್ವೇ ನಂ:153/5 ಹಾಗೂ ಸರ್ವೇ ನಂ.154/5 ಇವುಗಳ ಮೂಲ ಕ್ಷೇತ್ರವು ಕ್ರಮವಾಗಿ 1 ಎಕರೆ 39 ಗುಂಟೆ ಹಾಗೂ 2 ಎಕರೆ 10 ಗುಂಟೆ ಎಂದು ಹಿಸ್ಸಾ ಫಾರಂ ನಂಬರ್ 12 ರಲ್ಲಿ ದಿ:23/08/1953ರ ಡಾಯರಿ ನಂಬರ್ 1660 ರ ಪ್ರಕಾರ ಕ್ಷೇತ್ರ ವಿಂಗಡಣೆಯಾಗಿರುತ್ತದೆ. ಆ ಪ್ರಕಾರ 1950 ರಿಂದ ಇಲ್ಲಿಯವರೆಗೆ ಸದರಿ ಸರ್ವೇ ನಂಬರ್‌ಗಳ ಕ್ಷೇತ್ರವು ಗೇಣಿ ಮತ್ತು ಪಹಣಿ ಪತ್ರಿಕೆಗಳಲ್ಲಿ ಮುಂದುವರೆದುಕೊಂಡು ಬಂದಿರುತ್ತದೆ. ಯಾವುದೇ ಭೂ ಮಾಲೀಕರು ಹಿಸ್ಸಾ ಫಾರಂ ನಂಬರ್12 ರಿಂದ ತೊಂದರೆಗೆ ಒಳಪಟ್ಟಿದಲ್ಲಿ, ಸದರಿ ಹಿಸ್ಸಾ ಫಾರಂ ನಂಬರ್ 12ರ ವಿರುದ್ಧ ಮೇಲ್ಮನವಿ ಸಲ್ಲಸಿ, ಅದನ್ನು ರದ್ದುಪಡಿಸಿಕೊಳ್ಳಬೇಕಾಗಿರುತ್ತದೆ. ಅದರಂತೆ, ಮೇಲೆ ಹೇಳಿದ ಸರ್ವೇ ನಂಬರ್‌ಗಳ ಕೈ ಬರಹ ಪಹಣಿ ಪತ್ರಿಕೆ ಹಾಗೂ ಸಂಬಂಧಪಟ್ಟ ಡಾಯರಿ ಉತಾರ ಪರೀಕ್ಷಿಸಿ ನೋಡಲಾಗಿ, ಅದರಲ್ಲಿ ಸದರಿ ಅರ್ಜಿದಾರರು ಭೂ ದಾಖಲೆಗಳ ಇಲಾಖೆ, ಬೆಳಗಾವಿ ಇವರಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ" ಎಂದು ತಿಳಿಸಿರುತ್ತಾರೆ. ಆದರೆ, ಸದರಿ ಸರ್ವೇ ನಂಬರ್‌ಗಳಿಗೆ ಸಂಬಂಧಿಸಿದಂತೆ ಆರ್‌ಟಿಸಿ ಯಲ್ಲಿ ಕಂಡು ಬಂದಿರುವ ವಿಸ್ತೀರ್ಣದ ವ್ಯತ್ಯಾಸದ ಬಗ್ಗೆ ದೂರುದಾರರು ಅಸಲು ದಾವೆ ಸಂ:471/2004 ರ ಪ್ರಕರಣವನ್ನು ಮಾನ್ಯ ಅಪರ ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಅಥಣಿ ಇವರ ನ್ಯಾಯಾಲಯದಲ್ಲಿ ಹೂಡಿ, ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು "Therefore, looking into the Recital, it is clear that the plaintiffs are the owner of the suit properties. Therefore, the 2nd defendant is a revenue

authority has no right to reduce the extent the land of the plaintiffs without issuing notice to them......Under these circumstances the defendant No.2 is bound to rectify the mistakes crept in Revenue records" ಎಂದು ತೀರ್ಪಿನ ಪುಟ 9 ರಲ್ಲಿ ತಿಳಿಸಿರುವುದು ಸ್ಪಷ್ಟ ಪಡುತ್ತದೆ. ಆದ್ದರಿಂದ, ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ, ಎದುರುದಾರರು ಮಾನ್ಯ ನ್ಯಾಯಾಲಯದ ತೀರ್ಪಿನನ್ವಯ ಆರ್‌ಟಿಸಿ ಯಲ್ಲಿ ಕಂಡು ಬಂದಂತಹ ವಿಸ್ತೀರ್ಣದ ವ್ಯತ್ಯಾಸವನ್ನು ಸರಿಪಡಿಸಬೇಕಾಗಿತ್ತು.

4. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ದೂರುದಾರರ ಜಮೀನಿಗೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನು ಮೇಲೆ ಹೇಳಿದ ತೀರ್ಪಿನನ್ವಯ ಸರಿಪಡಿಸಲು ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

18/4

18/4/17